ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈ ಬಗ್ಗೆ ನಾನು ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ಮಳೆಯಿಂದ ಜನ ಸತ್ತಿದ್ದಾರೆ. ಮಂತ್ರಿಗಳು ಅಲ್ಲಿಗೆ ಹೋಗಿ ಬಂದಿದ್ದಾರೆ, ಅವರು ಇಂತಹ ಪ್ರಮುಖ ವಿಷಯದ ಬಗ್ಗೆ ಹೇಳಿಕೆಯನ್ನು ಕೊಡ ಬೇಕಾಗುತ್ತದೆ. ಇವತ್ತು ಅಲ್ಲಿ ಏನು ನಡೆದಿದೆ, ಅಲ್ಲಿ ಪ್ರಾಣಾಪಾಯ ಆಗಿದೆಯೇ ಎಂದು ತಿಳಿಯಲು ಎಲ್ಲರೂ ಆತುರದಿಂದ ಇದ್ದಾರೆ.

ಅಧ್ಯಕ್ಷರು —ಅವರು ನಾಳೆ ಹೇಳುತ್ತಾರೆ.

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ, ನನ್ನದೊಂದು ಪ್ರಶ್ನೆ ಪ್ರಶ್ನೋತ್ತರ ಪಟ್ಟಿಯಲ್ಲಿ ಕೊನೆಯಲ್ಲಿ ಇದ್ದು ಅದನ್ನು ತಾವು ಕರೆಯಲಿಲ್ಲ, ಇದು ಟೀ ತೋಟಕ್ಕೆ ಸಂಬಂಧಪಟ್ಟಿದ್ದು ಬಹಳ ಮಹತ್ವದ ಪ್ರಶ್ನೆಯಾಗಿದೆ.

ಅಧ್ಯಕ್ಷರು.—ಈ ಬಗ್ಗೆ ನಾನು ನೋಡುತ್ತೇನೆ. ಈಗ ಬೈರೇಗೌಡರ ಗಮನ ಸೆಳೆವ ಸೂಚನೆ.

ಶ್ರೀ ಸಿ. ಬೈರೇಗೌಡ.—ನಾನು ಈ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಮೊದಲು ಒಂದು ವಿಷಯದ ಬಗ್ಗೆ ನಾನು ತಮ್ಮ ಗಮನಸೆಳೆಯಬಯಸುತ್ತೇನೆ. ಮೊನ್ನೆ ವಾನ್ಯ ಲಕ್ಕಪ್ಪನವರಂ ಟೆಲಿಫೋನ್ ಟ್ಯಾಪಿಂಗ್ ವಿಷಯವಾಗಿ ಒಂದು ಸೂಚನೆ ತಂದಾಗ ಆ ಬಗ್ಗೆ ತಾವು ತಮ್ಮ ತೀರ್ಪನ್ನು ಕೊಡುತ್ತೇವೆಂದು ಹೇಳಿದ್ದೀರಿ.

ಅಧ್ಯಕ್ಷರು.—ಆ ಬಗ್ಗೆ ನಾಳೆ ಕೊಡುತ್ತಿದ್ದೇನೆ.

ಗಮನ ಸೆಳೆಯುವ ಸೂಚನೆಗಳು

(i) ರಾಜ್ಯ ಸರ್ಕಾರದವರು ಸಾಕಷ್ಟು ಪ್ರಮಾಣದಲ್ಲಿ ರೇಷ್ಮೆ ಗೂಡುಗಳನ್ನು ಒದಗಿಸುವಲ್ಲಿ ವಿಫಲವಾಗಿರುವುದು.

ಶ್ರೀ ಸಿ. ಬೈರೇಗೌಡ.— ರಾಜ್ಯದಲ್ಲಿ ಸರ್ಕಾರದವರು ಸಾಕಷ್ಟು ಪ್ರಮಾಣದ ರೇಷ್ಮೆ ಗೂಡುಗಳನ್ನು ಒದಗಿಸಲು ವಿಫಲವಾಗಿರುವುದರಿಂದ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟ ಹಾಗೂ ತೊಂದರೆಯಾದ ಬಗ್ಗೆ ವಾನ್ಯ ರೇಷ್ಮೆ ವ್ಯವಸಾಯದ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ (ವಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು).—ವಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಈ ಕೆಳಕಂಡ ಹೇಳಿಕೆ ಮಾಡಬಯಸುತ್ತೇನೆ.

ರಾಜ್ಯದ ರೇಷ್ಮೆ ಬೆಳೆಗಾರರ ವಾರ್ಷಿಕ ರೇಷ್ಮೆ ಮೊಟ್ಟೆಗಳ ಬೇಡಿಕೆ ಸುಮಾರು ೨೩ ಕೋಟಿ. ಈ ರೇಷ್ಮೆ ಮೊಟ್ಟೆಗಳ ತಯಾರಿಕೆಗೆ ಸುಮಾರು ೯೨ ಕೋಟಿ ಮೈಸೂರು ತಳಿ ಬಿತ್ತನೆ ಗೂಡುಗಳ ಅವಶ್ಯಕತೆ ಇದ್ದು ರಾಜ್ಯದಲ್ಲಿ ವಾರ್ಷಿಕ ೧೯ಳಿ ಕೋಟಿ ಮೈಸೂರು ಬಿತ್ತನೆ ಗೂಡುಗಳ ಉತ್ಪಾದನೆ ಯಾಗುತ್ತಿದೆ. ಸುಮಾರು೨೩.೩ಳಿ ಕೋಟಿ ರೇಷ್ಮೆ ಮೊಟ್ಟೆಗಳು ರಾಜ್ಯದಲ್ಲಿ ಉತ್ಪಾದನೆಯಾಗುತ್ತಿವೆ. ಇದರಲ್ಲಿ ರಾಜ್ಯ ಸರ್ಕಾರದ ಬಿತ್ತನೆ ಕೇಂದ್ರಗಳಲ್ಲಿ ೯.೪೭ ಕೋಟಿ ಮೊಟ್ಟೆಗಳನ್ನೂ ಉಳಿದ ೧೩.೯೭ ಕೋಟಿ ರೇಷ್ಮೆ ಮೊಟ್ಟೆಗಳನ್ನು ಖಾಸಗಿ ರೇಷ್ಮೆ ಮೊಟ್ಟೆ ತಯಾರಕರು ಉತ್ಪಾದಿಸುತ್ತಿದ್ದಾರೆ.

ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮಿಶ್ರತಳಿ ರೇಷ್ಮೆ ಹುಳುಗಳನ್ನು ಸಾಕುವ ವಲಯಗಳಲ್ಲಿ ಮುಂಚಿತವಾಗಿ ಮಳೆ ಬಿದ್ದರೆ ಮಿಶ್ರತಳಿ ರೇಷ್ಮೆ ಮೊಟ್ಟೆಗಳಿಗೆ ಆಕಸ್ಮಾತ್ತಾದ ಬೇಡಿಕೆ ಉಂಟಾಗುತ್ತದೆ. ಮೈಸೂರು ತಳಿ ಬೆಳೆಯುವ ಪ್ರದೇಶದಲ್ಲೂ ಮುಂಚಿತವಾಗಿ ಮಳೆ ಬಿದ್ದಿದ್ದಲ್ಲಿ ಬೇಡಿಕೆಯನ್ನು ಪೂರೈಸುವಷ್ಟು ಮೈಸೂರು ಬಿತ್ತನೆ ಗೂಡುಗಳ ಉತ್ಪಾದನೆಯಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಮೈಸೂರು ತಳಿ ಬಿತ್ತನೆ ಗೂಡುಗಳನ್ನು ಮಳೆ ಆಸರೆಯ ತೋಟಗಳಲ್ಲಿಯೆ ಬೆಳೆಯಲಾಗುತ್ತಿದೆ. ಈ ಅನಿಶ್ಚಿತ ವಾತಾವರಣವನ್ನು ಸರಿಪಡಿಸಲು ರೈತರು ವೈಯಕ್ತಿಕ ಉತ್ತಮ ನೀರಾವರಿ ಸೌಲಭ್ಯಗಳನ್ನು ತ್ವರಿತ ಗತಿಯಲ್ಲಿ ಒದಗಿಸಿಕೊಳ್ಳುವುದು ಅಗತ್ಯವೆನಿಸಿದೆ. ಆದರೆ ಮೈಸೂರು ತಳಿ ಬೆಳೆಯುವ ಪ್ರದೇಶದಲ್ಲಿ ಮುಂಚಿತವಾಗಿ ಮಳೆ ಬೀಳದೆ ಇದ್ದಲ್ಲಿ ಮೈಸೂರು ತಳಿ ಗೂಡುಗಳ ಉತ್ಪಾದನೆ ಕಡಿಮೆಯಾಗಿ ಗೂಡುಗಳ ಕೊರತೆ ಉಂಟಾಗುತ್ತದೆ. ಇದರಿಂದ ಮಿಶ್ರತಳಿ ಮೊಟ್ಟೆಗಳ ಉತ್ಪಾದನೆ ಕಡಿಮೆ ಸಹಾಗುತ್ತದೆ. ಈ ಕಾರಣದಿಂದ ಮಿಶ್ರತಳಿ ವಲಯದ ರೇಷ್ಮೆ ಮೊಟ್ಟೆಗಳ ಬೇಡಿಕೆಯನ್ನು ತ್ವರಿತ ಪೂರೈಸಲು ಸಾಧ್ಯವಾಗುವುದಿಲ್ಲ.

ಮಿಶ್ರತಳಿ ಮೊಟ್ಟೆಗಳನ್ನು ದೀರ್ಘಾವಧಿವರೆಗೆ ಶೇಖರಿಸಿಡಲು ಸಾಧ್ಯವಿಲ್ಲ. ೨೦ ದಿನಗಳವರೆಗೆ ಮಾತ್ರ ಸುರಕ್ಷಿತವಾಗಿ ಶೈತ್ಯಾಗಾರಗಳಲ್ಲಿ ಶೇಖರಿಸಬಹುದಾಗಿದೆ ಆದ್ದರಿಂದ ಮಳೆ ಬರುವುದೆಂದು ಪೂರ್ವ ನಿರೀಕ್ಷಣೆ ಮಾಡಿ ಮಿಶ್ರತಳಿ ಮೊಟ್ಟೆಗಳನ್ನು ಮುಂಚಿತವಾಗಿಯೇ ಉತ್ಪಾದಿಸಿಟ್ಟುಕೊಳ್ಳುವುದು ಕಷ್ಟಕರ. ಮೈಸೂರು ತಳಿಯು ಅನುವಂಶಿಕ ಗುಣಲಕ್ಷಣವಾದ ''ಬಹುಸಂತತಿ''ಯ ಸ್ವಭಾವದಿಂದಾಗಿ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿಯೇ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಿ ಸರಬರಾಜಿನ ವ್ಯವಸ್ಥೆ ಕೈಗೊಳ್ಳುವುದು ಕಷ್ಟಸಾಧ್ಯ.

ಏಪ್ರಿಲ್ ೧೯೯೦ರಲ್ಲಿ ೧೨ ಕೋಟಿ ಮೈಸೂರು ತಳಿ ರೇಷ್ಮೆ ಬಿತ್ತನೆ ಗೂಡುಗಳ ಉತ್ಪಾದನೆಯಾಗಿದೆ. ಇದರ ಪೈಕಿ ತಿಂಗಳ ಪ್ರಾರಂಭದ ೧೫ ದಿನಗಳಲ್ಲಿ ಅಧಿಕ ಉತ್ಪಾದನೆಯಾಗಿದೆ. ಈ ಪೈಕಿ ೭.೭೬ ಕೋಟಿಗಳಷ್ಟು ಮೈಸೂರು ತಳಿ ಗೂಡುಗಳು ಮಾತ್ರ ಮಿಶ್ರ ತಳಿ ಮೊಟ್ಟೆಗಳ ತಯಾರಿಕೆ ಸರಬರಾಜು ಆಗಿದ್ದು ಇನ್ನು ೪.೨೫ ಕೋಟಿ ಮೈಸೂರು ತಳಿ ಗೂಡುಗಳು ಬಿತ್ತನೆಗೆ ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ಮಾರಾಟವಾಗಿದೆ. ಇಲಾಖೆಯ ಬಿತ್ತನೆ ಕೇಂದ್ರಗಳಾಗಲಿ ಅಥವಾ ಖಾಸಗಿ ರೇಷ್ಮೆ ಮೊಟ್ಟೆ ತಯಾರಕರೇ ಆಗಲಿ ಈ ಹೆಚ್ಚಿನ ಗೂಡುಗಳನ್ನು ಮೊಟ್ಟೆತಯಾರಿಕೆಗೆ ಉಪಯೋಗಿಸಿಕೊಳ್ಳಲಿಲ್ಲ ಇದಕ್ಕೆ ಕಾರಣವೆಂದರೆ ಮಿಶ್ರತಳಿ ಪ್ರದೇಶದಲ್ಲಿ ಮುಂಚಿತವಾಗಿ ಮಳೆ ಆಗಿರುವುದರಿಂದ ರೇಷ್ಮೆ ಮೊಟ್ಟೆಗಳಿಗೆ ತಕ್ಷಣ ಹೆಚ್ಚಿನ ಬೇಡಿಕೆ ಬಂದಿದೆ. ಮೈಸೂರು ಬಿತ್ತನೆ ವಲಯದಲ್ಲಿ ಮೇ ತಿಂಗಳಿನಲ್ಲಿ ೭.೩೧ ಕೋಟಿ ಮೈಸೂರು ತಳಿ ಗೂಡುಗಳ ಉತ್ಪಾದನೆಯಾಗಿದೆ. ಕಳೆದ ವರ್ಷದ ಇದೇ ತಿಂಗಳಿನಲ್ಲಿ ೧೪ ಕೋಟಿ ಮೈಸೂರು ತಳಿ ಗೂಡುಗಳ ಉತ್ಪಾದನೆಯಾಗಿತ್ತು. ಇದರಲ್ಲಿ ೬.೯೫ ಕೋಟಿ ಮೈಸೂರು ತಳಿ ಗೂಡುಗಳು ಮಿಶ್ರ ತಳಿ ಮೊಟ್ಟೆ ತಯಾರಿಕೆಗೆ ಸರಬರಾಜು ಆಗಿದ್ದಿತು.

ಮೈಸೂರು ತಳಿ ಮತ್ತು ಬೈವೋಲ್ಟೈನ್ ತಳಿ ಬಿತ್ತನೆ ಗೂಡುಗಳ ಉತ್ಪಾದನೆಯು ಈಗ ಸುಧಾರಿಸಿದ್ದು ಮೈಸೂರು ತಳಿ ಗೂಡಿನ ಉತ್ಪಾದನೆಯು ಈಗ ಬೇಡಿಕೆಗಿಂತ ಅಧಿಕವಾಗಿದೆ. ಬೈವೋಲ್ಟೈನ ಬಿತ್ತನೆ ಗೂಡುಗಳ ಉತ್ಪಾದನೆಯು ಕೂಡ ಜೂನ್ ತಿಂಗಳ ಮೂರನೇ ವಾರದ ನಂತರ ಅಧಿಕಗೊಳ್ಳುತ್ತದೆ,

ಈ ತರಹದ ಸಂದಿಗ್ಧ ಪರಿಸ್ಥಿತಿಯನ್ನು ತಪ್ಪಿಸಲು ಸರ್ಕಾರವು ಶೈತ್ಯಾಗಾರಗಳನ್ನು ಸ್ಥಾಪಿಸಿದೆ. ಬೈವೋಲ್ಟೈನ್ ಮೊಟ್ಟೆಗಳನ್ನು ೯೦ ದಿನಗಳಿಂದ ೩೬೫ ದಿನಗಳವರೆವಿಗೆ ಶೈತ್ಯಾಗಾರದಲ್ಲಿ ಸುರಕ್ಷಿತವಾಗಿ ಕಾಯ್ದಿಡಬಹುದಾಗಿದೆ. ಈ ಕಾರಣದಿಂದ ರೇಷ್ಮೆ ಬೆಳೆಗಾರರಿಗೆ ಅವರ ಬೇಡಿಕೆಗೆ ಅನುಗುಣವಾಗಿ ಸಕಾಲದಲ್ಲಿ ರೇಷ್ಮೆ ಮೊಟ್ಟೆಗಳನ್ನು ಸರಬರಾಜು ಮಾಡಬಹುದಾಗಿದೆ. ಸರ್ಕಾರವು ಈ ನಿಟ್ಟಿನಲ್ಲಿ ಕಾರ್ಯಕ್ರಮ ಹಾಕಿಕೊಂಡಿದೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ನನ್ನ ನೋಟೀಸ್‌ನಲ್ಲಿ ನಾನು ಕೇವಲ ಒಂದು ವರ್ಷಕ್ಕೆ ಸಂಬಂಧಪಟ್ಟ ಹಾಗೆ ಕೇಳಿರಲಿಲ್ಲ. ಸತತವಾಗಿ ಹತ್ತಾರು ವರ್ಷಗಳಿಂದ ಮುಂಗಾರಿನಲ್ಲಿ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಮೊಟ್ಟೆ ಸಿಗದೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ ಅದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಅದರ ಬಗ್ಗೆ ಮಾನ್ಯ ಸಚಿವರು ಹೇಳಿಕೆಯನ್ನು ಕೊಡಲಿಲ್ಲ ಇದು ಒಂದು ವರ್ಷದ ಪ್ರಶ್ನೆಯಲ್ಲ. ಹತ್ತಾರು ವರ್ಷಗಳಿಂದ ಹೀಗೆಯೇ ನಡೆದುಕೊಂಡು ಬಂದಿದೆ. ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಏನು ಮಾಡಬೇಕೆಂದು ತೀರ್ಮಾನ ಮಾಡಿದ್ದೀರಿ ಅದರ ಬಗ್ಗೆ ಆಲೋಚನೆ ಮಾಡಿದ್ದೀರಾ ? ಇದು ಒಂದು ವರ್ಷದ ಪ್ರಶ್ನೆಯಲ್ಲ.

ಶ್ರೀ ಎಂ. ಎಸ್. ಆತ್ಮಾನಂದ —ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿರುವಹಾಗೆ ೧೩ ಶೈತ್ಯಗಾರಗಳನ್ನು ಸ್ಥಾಪಿಸುವವರಿದ್ದೇವೆ. ಅದರಲ್ಲಿ ಸುಮಾರು ಆರು ಶೈತ್ಯಾಗಾರಗಳಿಗೆ ಪವರ್ ಕನ್‌ಕ್ಷನ್ ಆಗಿ ಅವು ಕೆಲಸ ಮಾಡುತ್ತಿವೆ. ಉಳಿದವು ಇಷ್ಟರಲ್ಲೇ ಕೆಲಸವನ್ನು ಪ್ರಾರಂಭ ಮಾಡುತ್ತವೆ. ಅದರಲ್ಲಿ ಮೊಟ್ಟೆ ಸಂಗ್ರಹ ಮಾಡಿ ರೈತರಿಗೆ ಹಂಚುವ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ.—ಮಂತ್ರಿಗಳು ತಿಳಿಸಿರುವುದು ಬೈವೋಲ್ಟಿನ್ ಮೊಟ್ಟೆಗೆ ಸಂಬಂಧ ಪಟ್ಟಿದ್ದಾದು. ತಾವೇ ಒಪ್ಪಿಕೊಂಡಿದ್ದೀರಿ, ಇವುಗಳನ್ನು ದಾಸ್ತಾನು ಮಾಡಿ ಇಡುವುದಕ್ಕೆ ಆಗುವುದಿಲ್ಲವೆಂದು ಬೈವೋಲ್ಟಿನ್ ತಳಿಯನ್ನು ಎಲ್ಲರೂ ಬೆಳೆಯುವುದಿಲ್ಲ. ಅದು ಕಡಿಮೆ ಉತ್ಪಾದನೆಯಾಗುತ್ತದೆ. ಎಲ್ಲರ ಬೆಳೆಯತಕ್ಕ ರೇಷ್ಮೆ ತಳಿ ಮೊಟ್ಟೆಗಳ ಉತ್ಪಾದನೆ ಕಡಿಮೆ ಇದೆ, ಅದರ ಕೊರತೆ ಕಳೆದ ಹತ್ತಾರು ವರ್ಷಗಳಿಂದ ಕಂಡುಬರುತ್ತಿದೆ. ಇದು ಒಂದೂ ವರ್ಷದ್ದಲ್ಲ. ಹಲವಾರು ವರ್ಷಗಳಿಂದ ಕೊರತೆ ಇದೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಎಸ್ ಆತ್ಮಾನಂದ.—ಮಾನ್ಯ ಅಧ್ಯಕ್ಷರೇ, ಬಹುತೇಕ ಮೈಸೂರು ಬಿತ್ತನೆ ಪ್ರದೇಶದಲ್ಲಿ ಈ ಒಂದು ಗೂಡುಗಳಿಗೆ ಮೊಟ್ಟೆಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ಇದೆ. ಕಳೆದ ಎರಡು–ಮೂರು ವರ್ಷಗಳಿಂದ ಸರಿಯಾಗಿ ಮಳೆಯಾಗದೆ ಈ ವರ್ಷ ಕೂಡ ಹೋದವರ್ಷಕ್ಕೆ ಹೋಲಿಸಿಕೊಂಡರೆ ಮಳೆಯ ಪ್ರಮಾಣ ಕಡಿಮೆಯಾಗಿದ್ದು, ಮೈಸೂರು ತಳಿಯ ಗೂಡುಗಳು ಏನಿವೆ, ಅವುಗಳು ಸಾಕಷ್ಟು ಸಂಖ್ಯೆಯಲ್ಲಿ ದೊರಕದೇ ಇರುವುದರಿಂದ. ಈ ಅಭಾವ ಉಂಟಾಗಿದೆ ಮೈಸೂರು ಗೂಡುಗಳಿಗೆ ಇರತಕ್ಕಂಥ ಬಿತ್ತನೆ ಪ್ರದೇಶದಲ್ಲಿ ಹೆಚ್ಚಿನ ನೀರಾವರಿ ಸೌಲಭ್ಯ ಇರುವುದಿಲ್ಲ. ಅವರು ಮಳೆಯ ಆಶ್ರಯವನ್ನೇ ಅವಲಂಬಿಸಬೇಕಾಗುತ್ತದೆ. ಈ ಪರಿಸ್ಥಿತಿಯಲ್ಲಿ ರೈತರು ನೀರಾವರಿ ಆಶ್ರಯವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಈ ನೀರಾವರಿ ಆಶ್ರಯವನ್ನು ಹೆಚ್ಚಿಸಿಕೊಳ್ಳಲು ಸರ್ಕಾರದವರು ಕೂಡ ಏನಾದರೂ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ಹೇಳಿ ಆಲೋಚನೆ ಮಾಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ —ಮಾನ್ಯ ಮಂತ್ರಿಗಳ ಉತ್ತರದಲ್ಲಿ ಒಂದು ವಾಕ್ಯ ಮಾತ್ರ ಓದುವುದಕ್ಕೆ ಇಚ್ಛೆಪಡುತ್ತೇನೆ. ಎರಡನೇ ಪ್ಯಾರದಲ್ಲಿ—

"……ಈ ಅನಿಶ್ಚಿತ ವಾತಾವರಣವನ್ನು ಸರಿಪಡಿಸಲು ರೈತರಿಗೆ ವೈಯಕ್ತಿಕ ನೀರಾವರಿ ಸೌಲಭ್ಯಗಳನ್ನು ತಕ್ಷಣ ಒದಗಿಸಿಕೊಡುವುದು ಅಗತ್ಯವೆನಿಸಿದೆ…

ಎನ್ನತಕ್ಕದ್ದು ಒಪ್ಪಿದ್ದಾರೆ. ಈ ಪ್ರಶ್ನೆ ಮತ್ತು ನಾನು ಹೇಳತಕ್ಕ ಪ್ರಶ್ನೆಗೂ ಸಂಬಂಧ ಇದೆ. ಕಾರಣ ಏನೆಂದರೆ ನಿಜ. ಈ ಬಿತ್ತನೆ ಪ್ರದೇಶದಲ್ಲಿ ಮಳೆಯಿಂದ ಗೂಡುಗಳು ಬೆಳೆಯುತ್ತವೆ ಕಾರಣದಿಂದ ಮಳೆ ಬಂದರೆ ಗೂಡುಗಳು ಬರುತ್ತವೆ ಇಲ್ಲದಿದ್ದರೆ ಇಲ್ಲ ನಾನು ಒಪ್ಪುತ್ತೇನೆ. ನೀರಾವರಿ ಬಿತ್ತನೆ ಪ್ರದೇಶದಲ್ಲಿ ನೀರಾವರಿಯನ್ನು ವಿಶೇಷವಾಗಿ ಈ ರೈತರಿಗೆ ಒದಗಿಸಬೇಕು. ಈಗ ೫೨ ಕೋಟಿ ರೂಪಾಯಿಂ ಪೈಸ್ಸಪಬಿಲೈಸೇಷನ್ ಫಂಡ್ ಇದೆ. ಇರತಕ್ಕಂಥ ಕಾನೂನು ಪ್ರಕಾರ ರೇಷ್ಮೆ ಉದ್ಯಮಕ್ಕೆ ಮೂಶ್ಯ ಇದನ್ನು ಉಪಯೋಗಿಸಬೇಕೆಂದು ಇದೆ. ಈ ಹಣವನ್ನು ರೈತರಿಗೆ ಅವರು ಕೊಳವೆ ಬಾವಿಯನ್ನೋ ತೆರೆದ ಬಾವಿಯನ್ನು ತೆಗೆಯವುದಕ್ಕೆ ನೀವು ಕೊಟ್ಟು ಈ ಸಮಸ್ಯೆ ಏನಿದೆ, ಇದನ್ನು ಶಾಶ್ವತವಾಗಿ ನಿವಾರಣೆ ಮಾಡುವುದಕ್ಕೆ ತಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಎಸ್. ಆತ್ಮಾನಂದ :—ಮಾನ್ಯ ಅಧ್ಯಕ್ಷರೇ, ಇದು ಉತ್ತಮವಾದ ಸಲಹೆ ಈ ಬಗ್ಗೆ ಸರ್ಕಾರ ಕೂಡ ಆಲೋಚನೆ ಮಾಡುತ್ತದೆ. ನಾನು ಇಲಾಖೆಯ ಬೇಡಿಕೆಗಳು ಬಂದ ಸಂದರ್ಭದಲ್ಲಿ ಇದಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಸಾಕು ಬಿಡಿ. ಬೇಡಿಕೆಗಳು ಬಂದಾಗ ಮತ್ತೆ ಕೇಳಬಹುದು.

ಶ್ರೀ ಸಿ. ಬೈರೇಗೌಡ.—ನಾನು ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಬೇಕಾಗಿದೆ. ಮಧ್ಯಾಹ್ನ ವಿದ್ಯಾ ಇಲಾಖೆಯ ಬೇಡಿಕೆ ಬಗ್ಗೆ ಉಪಪ್ರಶ್ನೆ ಕೇಳಬೇಕೆಂದಿದ್ದೆ. ತಾವು ಅವಕಾಶ ಕೊಡಲಿಲ್ಲ. ಬೇಡಿಕೆ ಬಂದಾಗ ಈ ಪರಿಸ್ಥಿತಿ ಆಗುತ್ತದೆ ಇದಕ್ಕಾಗಿ ಒಂದು ಪ್ರತ್ಯೇಕವಾದ ವಿಷಯವನ್ನು ತಂದಾಗ, ಬೇಡಿಕೆ ಬಂದಾಗ ಮಾತನಾಡಿ ಎಂದು ತಾವು ಹೇಳುತ್ತೀರಿ……

ಅಧ್ಯಕ್ಷರು —ಕೇಳಿ.

ಶ್ರೀ ಸಿ. ಬೈರೇಗೌಡ.—ಬಿತ್ತನೆ ಪ್ರದೇಶದ ನೀರಾವರಿ ಬಗ್ಗೆ ಬಹಳ ಸಮಸ್ಯೆ ಇದೆ. ಇದು ಬಹಳ ಮುಖ್ಯವಾಗಿರತಕ್ಕಂಥಾದ್ದು. ನೀವು ಆಲೋಚನೆ ಮಾಡುತ್ತೇವೆ ಎಂದು ಕೇಳಿತರೆ. ಆಲ್ಲಿ ರೈತರಿಗೆ ಇವತ್ತಿನ ದಿವಸ ತೊಂದರೆ ಇದೆ. ರೇಷ್ಮೆ ಸೊಪ್ಪು ಬೆಳೆದದ್ದನ್ನು ದನಗಳಿಗೆ ಹಾಕುತ್ತಿದ್ದಾರೆ. ಕೊಂಡುಂಕೊಳ್ಳುವವರೇ ಇಲ್ಲ. ಆದ್ದರಿಂದ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ನೀರಾವರಿ ಒದಗಿಸತಕ್ಕದ್ದು ಒಂದು. ಇದಕ್ಕೆ "ನೋಡುತ್ತೇವೆ, ಮಾಡುತ್ತೇವೆ, ಪರಿಶೀಲಿಸುತ್ತೇವೆ, ಎಂದು ಹೇಳುವುದು ಬೇಡ. ಮಾಡಿಯೇ ಮಾಡುತ್ತೇವೆ ಎಂಬ ಉತ್ತರವನ್ನು ತಾವು ದಯವಿಟ್ಟು ಕೊಡಬೇಕು. ಮತ್ತೊಂದು, ಈ ರೇಷ್ಮೆ ಗೈನೇಜ್‌ಗಳು ಏನಿವೆ, ಇವುಗಳಲ್ಲಿ ನಡೆಯತಕ್ಕಂಥ ಅವ್ಯವಹಾರಗಳಿಂದ ನಮ್ಮ ರಾಜ್ಯದಿಂದ ಆಂಧ್ರ ಪ್ರದೇಶಕ್ಕೂ ಕೂಡ ಮೊಟ್ಟೆಗಳು ಹೋಗುತ್ತವೆ. ಚಿಟ್ಟೆಗಳನ್ನು ಎರಡು ಸಾರಿ ಪೇರಿಂಗ್ ಮಾಡಬೇಕೆಂದು ಇದೆ. ಇದನ್ನು ಯಾವುದನ್ನೂ ಪಾಲಿಸದೆ ಚಿಟ್ಟೆಗಳು ಖಾಸಗೀ ಯವರಿಗೆ ಸರಬರಾಜು ಆಗುತ್ತಿದೆ ಈ ಗೈನೇಜ್‌ಗಳಿಂದ. ಮತ್ತು ತಯಾರಾದಂಥ ಮೊಟ್ಟೆಗಳು ಆಂಧ್ರಪ್ರದೇಶಕ್ಕೆ, ತಮಿಳುನಾಡಿಗೆ ಹೋಗುತ್ತವೆ. ಅದಕ್ಕೋಸ್ಕರ ನನ್ನ ಸಲಹೆ ಏನೆಂದರೆ, ಈ ಮುಂಗಾರುವಿನಲ್ಲಿ ಒಂದು ಸ್ಪೆಶಲ್ ಸ್ಕ್ವಾಡ್ ಇಟ್ಟು ಗೈನೇಜ್‌ಗಳ ಹತ್ತಿರ ಹೋಗಿ ಎಷ್ಟು ಗೂಡು

ಇಟ್ಟಿದ್ದಾರೆ. ಎಷ್ಟು ಚಿಟ್ಟೆ ತಯಾರಾಯಿತು, ಎಷ್ಟು ಮೊಟ್ಟೆ ತಯಾರಾಯಿತು ಎಂದು ನೋಡಿದರೆ ಈ ಅವ್ಯವಹಾರವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ.ಎಸ್ ಆತ್ಮಾನಂದ.—ನೀರಾವರಿ ಒದಗಿಸುವ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ, ಇದಂ ರೈತರಿಗೆ ಒಹಳ ಪ್ರಾಮುಖ್ಯವಾದುದ್ದು. ತಕ್ಷಣ ಯಾವ ರೀತಿ ಯೋಜನೆ ಹಾಕಿಕೊಳ್ಳಲಿಕ್ಕೆ ಸಾಧ್ಯ ಎಂದು ಹೇಳುವುದಕ್ಕೆ ಆಗುವುದಿಲ್ಲ, ನನ್ನ ಉತ್ತರದಲ್ಲಿ ಹೇಳುತ್ತೇನೆ. ಮೈಸೂರು ತಳಿ ಬಿತ್ತನೆ ಪ್ರದೇಶದಲ್ಲಿ ರೈತರಿಗೆ ಬೇಕಾದ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಲಿಕ್ಕೆ ನಾನು ಖಂಡಿತವಾಗಿ ಈ ಬಗ್ಗೆ ಆಲೋಚನೆ ಮಾಡಿ ಅದನ್ನು ಕಾರ್ಯರೂಪಕ್ಕೆ ತರುತ್ತೇನೆ ಎಂದು ಹೇಳುತ್ತೇನೆ. ಮತ್ತು ಮಾನ್ಯ ಸದಸ್ಯರು ಹೇಳಿರುವ ಸಲಹೆ ಸೂಕ್ತವಾಗಿದೆ. ಈ ಬಗ್ಗೆ ಮೈಸೂರಿನಲ್ಲಿ ಒಬ್ಬ ಅಧಿಕಾರಿಯ ಬಗ್ಗೆ ಸರಿಯಾದ ವ್ಯವಸ್ಥೆ ಇಲ್ಲವೆಂದು ಹೇಳಿ ಅವರ ಮೇಲ್ಕ್ಟಟ್ಟದ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಸಿ. ಬೈರೇಗೌಡ.—ಅಧಿಕಾರಿಗಳು ದುರುಪಯೋಗಪಡಿಸಿಕೊಂಡು, ೧೫೦ ರೂಪಾಯಿ ಮೊಟ್ಟೆಯನ್ನು ೨೦೦ ರೂಪಾಯಿಗಳಿಗೆ ಮಾರುತ್ತಿದ್ದಾರೆ. ಇದಕ್ಕೆ ಒಂದು ಸ್ಕ್ವಾಡ್ ಮಾಡಿ ಎಂದು ಹೇಳಿದ್ದೇನೆ.

ಶ್ರೀ ಎಂ.ಎಸ್. ಆತ್ಮಾನಂದ.—ಆಲೋಚನೆ ಮಾಡಿ ಮಾಡುತ್ತೇವೆ.

ಶ್ರೀ ಜೆ. ರಾಜಗೌಡ.—ರೇಷ್ಮೆ ಇಲಾಖೆಯವರ ಮುಂದಾಲೋಚನೆಯ ಅಭಾವದಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ, ವೈಜ್ಞಾನಿಕವಾಗಿ ಎಷ್ಟು ಉತ್ಪಾದನೆ ಆಗಬೇಕು ಎನ್ನುವುದರ ಬಗ್ಗೆ ನಾನು ಸಮೀಕ್ಷೆ ಕೊಡುತ್ತೇನೆ. ಈ ರಾಜ್ಯದಲ್ಲಿ ಎಂ. ವೈ. ಕಡ್ಡಿ ಎಷ್ಟಿದೆ, ನೀರಾವರಿ ಕಡ್ಡಿ ಎಷ್ಟಿದೆ, ಮಳೆಗಾಲದಲ್ಲಿ ಬೆಳೆಯುತಕ್ಕ ಕಡ್ಡಿ ಎಷ್ಟು ಇದೆ ಎಂಬುದನ್ನು ನೋಡಬೇಕು. ಸುಮಾರು ೮೦೦ ಕೆ.ಜಿ. ಸೊಪ್ಪಿಗೆ, ಒಂದು ನೂರು ಕೋಶಿ ಮೇಯಿಸುವುದಕ್ಕೆ ಸಾಧ್ಯ. ಎಷ್ಟು ನಷ್ಟವಾಗಿ ಸೊಪ್ಪು ಬರುತ್ತದೆ, ಅಷ್ಟು ಮೊಟ್ಟೆ ಬರಲೇಬೇಕು. ಒಂದು ಬೆಳೆ ಬೆಳೆಯುವುದಿರುವುದರಿಂದ, ಸುಮಾರು ೬೦ ಕೋಟಿ ರೂಪಾಯಿ ನಷ್ಟ ರೈತರಿಗೆ ನಷ್ಟವಾಗಿದೆ. ಒಂದು ವರ್ಷದಲ್ಲಿ ೬ ಸಾವಿರ ಟನ್ ರೇಷ್ಮೆ ಉತ್ಪಾದನೆ ಮಾಡುತ್ತೇವೆ, ಒಂದು ವರ್ಷದಲ್ಲಿ ೧೦ ಬೆಳೆ ತೆಗೆಯುತ್ತೇವೆ, ಒಂದು ಬೆಳೆಗೆ ೬೦೦ ಟನ್ ಗೂಡು ಉತ್ಪಾದನೆಯಾ ಆಗುತ್ತದೆ. ೬೦೦ ಟನ್ ಗೂಡಿನಲ್ಲಿ ೬ ಲಕ್ಷ ಕೆ.ಜಿ. ರೇಷ್ಮೆಯಾಗುತ್ತದೆ. ಈ ೬ ಲಕ್ಷ ಕೆ.ಜಿ.ಗೆ ೬೦ ಕೋಟಿ ರೂಪಾಯಿ ನಷ್ಟವಾಗಿರುವುದು ನಮ್ಮ ರೈತರಿಗೆ. ಸಮಾಜದಲ್ಲಿ ನಿಕೃಷ್ಟವಾಗಿರುವ ವರ್ಗ ಎಂದರೆ, ಈ ರೈತವರ್ಗ. ಈ ವರ್ಗವನ್ನು ಅಲಕ್ಷ್ಯ ಮಾಡಿದ್ದಾರೆ. ೬೦ ಕೋಟಿ ನಷ್ಟವಾಗಿರುವ ಈ ರೈತರಿಗೆ ಏನು ಪರಿಹಾರ ಕೊಡುವುದಕ್ಕೆ ಸಾಧ್ಯ. ವೈಜ್ಞಾನಿಕವಾಗಿ ಹೇಳ ಬೇಕಾದರೆ, ಎಷ್ಟು ಮೊಟ್ಟೆ ನಮ್ಮ ರಾಜ್ಯಕ್ಕೆ ಬೇಕು. ಯಾವ ಯಾವ ತಿಂಗಳಿಗೆ ಎಷ್ಟು ಬೇಕು ಎಂಬುದನ್ನು ಸಮೀಕ್ಷೆ ಮಾಡಬೇಕು. ತಮ್ಮ ಇಲಾಖೆಯವರ ಹತ್ತಿರ ಈ ಮಾಹಿತಿ ಇದೆಯೇ ? ಒಂದು ಬೆಳೆ ಸೊಪ್ಪು ನಷ್ಟವಾದರೂ ರೈತರಿಗೆ ಎಷ್ಟು ನಷ್ಟವಾಯಿತು. ತಾವು ಕೊಡತಕ್ಕ ಮೊಟ್ಟೆಗೂ, ಸೊಪ್ಪಿಗೂ ಹೊಂದಾಣಿಕೆಯಾಗುವುದಿಲ್ಲ. ಈ ರೀತಿ ಆದರೆ ಈ ರೇಷ್ಮೆ ಉದ್ಯಮವನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆಯೇ? ದಯವಿಟ್ಟು ತಾವು ಯೋಚನೆ ಮಾಡಬೇಕು. ಕೋಳಿ ಮೊಟ್ಟೆ ೬ಕ್ಕೆ ಪೈಸೆ ಆದರೆ, ರೇಷ್ಮೆ ಮೊಟ್ಟೆ ಬೆಲೆ ೨೨೫ ರೂಪಾಯಿ. ಇವರು ಮಾರತಕ್ಕ ಬೆಲೆ ೧೭೫ ರೂಪಾಯಿ. ಇಲ್ಲಿ ವರ್ತಕರನ್ನು ಅಲ್ಲ, ಸೇವಾವೃತ್ತಿ. ಲಾಭ, ನಷ್ಟ ನೋಡಬಾರದು. ರೈತರಿಗೆ ಸಕಾಲದಲ್ಲಿ ಬಿತ್ತನೆ ಮೊಟ್ಟೆ ಪೂರೈಸದೇ ಹೋದರೆ, ಬೆಳೆ ಹಾಳಾಗುತ್ತದೆ, ಇಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಬಾರದು. ಎಷ್ಟು ಮೊಟ್ಟೆಬೇಕೆಂಬ ಮಾಹಿತಿಯನ್ನು ಮೊದಲೇ ಸಂಗ್ರಹಿಸಬೇಕು. ಅವುಗಳನ್ನು ನೀವು ಶೈತ್ಯಾಗಾರದಲ್ಲಿಡಿ ಅಥವಾ ಎಲ್ಲಿಯಾದರೂ ಇಡಿ. ಮೊಟ್ಟೆಯನ್ನು ಸಕಾಲದಲ್ಲಿ ರೈತರಿಗೆ ಸರಬರಾಜು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇವತ್ತಿನದಿವಸ ಅಧಿಕಾರಿಗಳ ಮುಂದಾಲೋಚನೆಯ ಅಭಾವದಿಂದ ಈ ಪರಿಸ್ಥಿತಿ ಬಂದಿದೆ. ಈ ಶತಮಾನದಲ್ಲಿಯೇ ರೇಷ್ಮೆ ೨೨೫ ಆಗಿರಲಿಲ್ಲ. ಇವತ್ತು ಇಂತಹ ವಾತಾವರಣವನ್ನು ನಿರ್ಮಾಣ ಮಾಡಿ, ಇಂತಹ ಸಂಕಷ್ಟಕ್ಕೆ ರೈತರನ್ನು ಗುರಿ ಮಾಡ ಬೇಡಿ ಎಂದು ಅಧ್ಯಕ್ಷರ ಮೂಲಕ ತಮ್ಮನ್ನು ಕೇಳಿಕೊಳ್ಳುವುದಕ್ಕೆ ಇಚ್ಚಿಪಡುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ.—ಇದರ ಬಗ್ಗೆ ಒಂದು ಸಮೀಕ್ಷೆ ನಡೆಸಿ, ಈ ಮೊಟ್ಟೆಗಳ ಅಭಾವ ನಿವಾರಣೆಗೆ ಶಾಶ್ವತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುವುದು ಎಂದು ಹೇಳುತ್ತೇನೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಮೊಟ್ಟೆ ಅಭಾವ ಇದ್ದರೂ ಕಳೆದ ವರ್ಷಕ್ಕೆ ಹೋಲಿಸಿದರೆ ನಮ್ಮ ರೈತರು ವಾರ್ಕೆಟ್ಟಿನಲ್ಲಿ ವಹಿವಾಟು ಮಾಡಿರುವುದು ಹೋದ ವರ್ಷಕ್ಕಿಂತ ಈ ವರ್ಷ ಹೆಚ್ಚಾಗಿದೆ. ಒಟ್ಟಿನಲ್ಲಿ

ಇನ್ನು ಮುಂದೆ ಈ ಮೊಟ್ಟೆಯ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಣೆ ಮಾಡುವುದಾಗಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಎಂ.ಡಿ. ನಂಜುಂಡಸ್ವಾಮಿ.—ಒಂದೇ ಒಂದು ವಿಷಯ. ಇದು ಒಬ್ಬ ವ್ಯಕ್ತಿಯ ವಿಷಯ. ಇದು ಇಡೀ ರಾಜ್ಯದ ರೈತರ ಸಮಸ್ಯೆ. ಈಗಾಗಲೇ ತಾವು ಬೇರೆಯವರಿಗೆ ಅವಕಾಶ ಮಾಡಿ ಕೊಟ್ಟಿದ್ದೀರಿ, ನನಗೆ ಏಕೆ ತಾರತಮ್ಯ ಮಾಡುತ್ತೀರಿ...

ಅಧ್ಯಕ್ಷರು.—ನಾವು ಹಾಕಿಕೊಂಡಿರತಕ್ಕ ರೂಲ್ಸ್ ಪ್ರಕಾರ, ಗಮನ ಸೆಳೆಯುವ ಸೂಚನೆಗೆ ಯಾರು ಹೆಸರು ಕೊಟ್ಟಿರುತ್ತಾರೆ, ಅವರಿಗೆ ಮಾತ್ರ ಕೇಳುವುದಕ್ಕೆ ಅವಕಾಶವಿದೆ. ಈಗ ಮುಂದಿನ ಗಮನ ಸೆಳೆಯುವ ಸೂಚನೆ, ಶ್ರೀ ಎಲ್. ಆರ್. ಶಿವರಾಮೇಗೌಡ ತಾವು ಕೇಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾನು ಸರ್ಕಾರದ ಗಮನ ಸೆಳೆದಿರುವ ಪ್ರಶ್ನೆ ಬೇರೆ. ಆದರೆ ಇಲ್ಲಿ ಬಂದಿರತಕ್ಕ ಉತ್ತರವೇ ಬೇರೆ. ಇದಕ್ಕೆ ತಾವು ಪರಿಹಾರ ಒದಗಿಸಬೇಕು. ಇಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಇಲ್ಲಿ ಬಂದಿರತಕ್ಕದ್ದು, ಸಹಕಾರ ಸಂಸ್ಥೆಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳ ಮೂಲಕ ರೈತರಿಗೆ ಗೊಬ್ಬರ ವಿತರಣೆಯಾಗದೇ ತೊಂದರೆಯಾಗಿರುವ ಬಗ್ಗೆ ಸಹಕಾರ ರಾಜ್ಯ ಮಂತ್ರಿಗಳ ಗಮನ ಸೆಳೆಯುವುದು ಎಂದು ಬಂದಿದೆ. ಆದರೆ, ನಾನು ಕೇಳಿದ್ದುದ್ದು, ಸಹಕಾರಿ ಸಂಘಗಳು ಗೊಬ್ಬರ ಮತ್ತು ನ್ಯಾಯಬೆಲೆ ಅಂಗಡಿಗಳನ್ನು ನಡೆಸುತ್ತಿದ್ದು, ಇತ್ತೀಚೆಗೆ, ಸಾಲ ಮನ್ನಾ ವಿಚಾರ ಬಂದ ಮೇಲೆ ಅವರುಗಳು ಇಟ್ಟು ಕೊಂಡಿದ್ದ ದುಡಿಮೆ ಬಂಡವಾಳವನ್ನು ಬ್ಯಾಂಕಿನವರಂ ತೆಗೆದುಕೊಂಡು ಬಂದಿರುತ್ತಾರೆ. ಈಗ ದುಡಿಮೆ ಬಂಡವಾಳ ಇಲ್ಲದೇ ಗೊಬ್ಬರ ತಂದು ವ್ಯಾಪಾರ ಮಾಡಲು ಸಹಕಾರಿ ಸಂಸ್ಥೆಗಳಿಗೆ ಶಕ್ತಿ ಇಲ್ಲದಿರುವುದರಿಂದ ರೈತರಿಗೆ ಗೊಬ್ಬರ ಸಿಕ್ಕದೇ ತೊಂದರೆಯಾಗಿದೆ, ಆದ್ದರಿಂದ ಸರ್ಕಾರದ ಗಮನವನ್ನು ಈ ವಿಷಯದಲ್ಲಿ ಸೆಳೆಯುತ್ತೇನೆ ಎಂದು ಕೇಳಿದ್ದೆ. ಈ ವಿಚಾರ ಈಗಾಗಲೇ ಎರಡು ಮೂರು ದಿವಸ ಮುಂದಕ್ಕೆ ಹೋಗಿದೆ.

ಅಧ್ಯಕ್ಷರು.—ಇದನ್ನು ನಾನು ನೋಡಂತ್ತೇನೆ. ಇದನ್ನು ಮುಂದಕ್ಕೆ ತೆಗೆದುಕೊಳ್ಳೋಣ. ಇದರ ಬಗ್ಗೆ ನನ್ನ ಸೀರಿಯಸ್ ಕನ್‌ಸಿಡರೇಷನ್ ಮೈಂಡನ್ನು ಅಪ್ಲೈ ಮಾಡಬೇಕು. ನೀವು ಎತ್ತಿರತಕ್ಕ ಆಕ್ಷೇಪಣೆಗೆ ನನ್ನ ತೀವ್ರವಾದ ಗಮನವನ್ನು ಕೊಡುತ್ತೇನೆ.

ನಿಯಮ ೩೩ಳಿರ ಮೇರೆಗೆ

ಕುಣಿಗಲ್ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು ಬಗ್ಗೆ

ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಅಧ್ಯಕ್ಷರೇ, ಕುಣಿಗಲ್ ಟೌನ್‌ನಲ್ಲಿ ಕುಡಿಯುವ ನೀರಿನ ಬವಣೆಯಿಂದ ನಾಗರೀಕರು ಬಹಳ ವರ್ಷಗಳಿಂದ ಕಂಗಾಲಾಗಿರುತ್ತಾರೆ, ನಾಗರೀಕರು ನೀರಿನ ಬಗ್ಗೆ ಹಿಂದಿನ ಸರಕಾರ ಹಾಗೂ ನಮ್ಮ ಸರಕಾರಕ್ಕೆ ಅನೇಕ ಮನವಿಗಳನ್ನು ಕೊಟ್ಟಮೇಲೆ ನಮ್ಮ ಘನ ಸರಕಾರ ದವರು ಸುವಹರು ಒಂದು ಕೋಟಿ ರೂಪಾಯಿ ಹಣ ಮಂಜೂರಾತಿ ಕೊಡಲು ಒಪ್ಪಿ ಸ್ವಲ್ಪ ಹಣವನ್ನು ಬೋರ್ ತೆಗೆಯಲು ಕೊಟ್ಟು ಬಾಕಿ ಹಣವನ್ನು ಕೊಟ್ಟಿರುವುದಿಲ್ಲ. ಆದ್ದರಿಂದ ತ್ವರಿತವಾಗಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಒತ್ತಾಯಿಸುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ (ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಲಕ್ಕಪ್ಪನವರ ನೋಟೀಸಿಗೆ ಉತ್ತರವಾಗಿ ಈ ಕೆಳಕಂಡ ಹೇಳಿಕೆಯನ್ನು ಸದನದ ಮುಂದೆ ಇಡುತ್ತೇನೆ.

The population of Kunigal town as per 1981 census is 18,000 and the present population may be about 21,000. An Augmentation of Water Supply Scheme to Kunigal Town with borewells as source at a cost of Rs. 12.00 lakhs has been Administratively Approved in 1976 and was commissioned.

Uptill now under various scarcity relief programmes 27 bore-wells have been sunk. Out of which 13 borewells are harnessed with power pumps and 14 borewells are harnessed with